ESI.A.No.54/2018

AW-1,

ದಿನಾಂಕಃ 28-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ.ABN ವಕೀಲರಿಂದ

ಸಾಕ್ಷಿಗೆ ಕನ್ನಡ ಭಾಷ್ಷೆ ತಿಳಿಯದೇ ಇರುವುದರಿಂದ ಶ್ರೀ.ಪಿಪಿಬಿಆರ್ ವಕೀಲರ ಸಹಾಯದಿಂದ ಸಾಕ್ಷಿಯು ಹಿಂದಿಯಲ್ಲಿ ನೀಡಿದ ಸಾಕ್ಷ್ಯವನ್ನು ಕನ್ನಡಕ್ಕೆ ಭಾಷಾಂತರಿಸಿ ದಾಖಲಿಸಿಕೊಳ್ಳಲಾಗಿದೆ.

ನಮ್ಮ ಸಂಸ್ಥೆಯು ಇ ಎಸ್ ಐ ಕಾಯಿದೆಯ ವ್ಯಾಪ್ತಿಗೆ ಒಳಪಟ್ಟಿದೆ ಎಂದರೆ ನಿಜ. ದಿನಾಂಕಃ1-10-2014 ರಿಂದ 31-5-2015 ರವರೆಗೆ ನಾನು ಇ ಎಸ್ ಐ ವಂತಿಗೆಯನ್ನು ಪಾವತಿಸಿಲ್ಲ ಎಂಬ ಕಾರಣಕ್ಕೆ ನನಗೆ ನೋಟೀಸು ನೀಡಲಾಗಿತ್ತು ಎಂದರೆ ಸಾಕ್ಷಿ ಅದನ್ನು ಆಫೀಸಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ನೋಟೀಸಿಗೆ ದಿಃ28-7-2015 ರಂದು ನಾನು ಮರು ಉತ್ತರವನ್ನು ನೀಡಿದ್ದೇನೆ ಎಂದರೆ ನಿಜ. ಸದರಿ ಉತ್ತರದಲ್ಲಿ ನಾನು ನಮ್ಮ ಸಂಸ್ಥೆಯುಲ್ಲಿ 60 ಜನ ಕಾರ್ಮಿಕರು ಇದ್ದಾರೆ ಮತ್ತು ಅವರೆಲ್ಲರೂ ರೂ.15000-00 ರೂಪಾಯಿಗಳಿಗಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದಾರೆ ಎಂದು ಹೇಳಿದ್ದೆ ಎಂದರೆ ನಿಜ. ರೂ.15000-00 ಕ್ಕಿಂತ ಕಡಿಮೆ ವೇತನ ಪಡೆಯುವ ಕಾರ್ಮಿಕರ ಬಗ್ಗೆ ಇ ಎಸ್ ಐ ವಂತಿಗೆಯನ್ನು ಪಾವತಿಸುವಂತೆ ನನಗೆ ತಿಳಿಸಿ ನನಗೆ ಇನ್ನೊಂದು ಖುದ್ದು ಸುನಾವಣೆ ದಿನಾಂಕವನ್ನು 6-9-2016 ರಂದು ನೀಡಿದ್ದರು ಎಂದರೆ ನಿಜ. ಆನಂತರ ದಿಃ9-5-2018 ರಂದು ನಡೆದ ಇನ್ನೊಂದು ಖುದ್ದು ಸುನಾವಣೆಯಲ್ಲಿ ನಮ್ಮ ಪರವಾಗಿ ಶಿವಸ್ವಾಮಿ ಬಿ ವಿ ಎನ್ನುವವರು ಹಾಜರಾಗಿದ್ದು ಅವರು ಎಲ್ಲರೂ ರೂ.15000-00 ಕ್ಕಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದಾರೆ ಎಂದು ಮೌಹಿಕವಾಗಿ ತಿಳಿಸಿ ದಾಖಲೆಗಳನ್ನು ಹಾಜರು ಮಾಡಲು ಕಾಲಾವಕಾಶ ಕೇಳಿದರು ಎಂದರೆ ನಿಜ. ದಿನಾಂಕಃ25-5-2018 ರಂದು ನಮ್ಮ ಪ್ರತಿನಿಧಿಯವರು ಹಾಜರಾಗಿ ಮಸ್ಟರ್ ರೋಲ್ ಕಮ್ ವೇಜ್ ರಿಜಿಸ್ಟರ್ , ಐ ಟಿ ಆರ್ ಫಾರ್ ದಿ ಈಯರ್ 2015-16, 2017-18 Income and Expenditure Account for the year 2015-16 and Bank statement ಹಾಜರುಪಡಿಸಿದರು ಎಂದರೆ ನಿಜ. ಆ ಸಮಯದಲ್ಲಿ Profession Tax receipt, Cash book, Bills and Vourchers ಗಳನ್ನು ಹಾಜರುಪಡಿಸುವಂತೆ ತಿಳಿಸಿದ್ದರು ಎಂದರೆ ಸಾಕ್ಷಿ ನಾವು ಅದನ್ನು ಹಾಜರುಪಡಿಸಿದ್ದೇವೆ ಎಂದು ನುಡಿದಿರುತ್ತಾರೆ. ಆ ದಿನ ನನ್ನ ಪ್ರತಿನಿಧಿಯವರು ಕಾಲಾವಕಾಶ ಕೇಳಿದ್ದರಿಂದ ದಿನಾಂಕಃ8-6-2018 ರಂದು ಇನ್ನೊಂದು ದಿನಾಂಕವನ್ನು ನಿಗಧಿಪಡಿಸಲಾಗಿತ್ತು ಎಂದರೆ ಸಾಕ್ಷಿ ನಾನು ಊರಿಗೆ ಹೋಗಿದ್ದೆ ಎಂದು ನುಡಿದಿರುತ್ತಾರೆ. ಆ ದಿನ ನನ್ನ ಪರವಾಗಿ ಜನರಲ್ ಮ್ಯಾನೇಜರ್ ಶ್ರೀಕಾಂತರಾವ್ ಹಾಜರಾಗಿದ್ದರು ಎಂದರೆ ನಿಜ. ನಮಗೆ ನಮ್ಮ ಕಾರ್ಮಿಕರು ಇ ಎಸ್ ಐ ಕಾಯಿದೆ ವ್ಯಾಪ್ತಿಗೆ ಬರುವುದಿಲ್ಲ ಎಂದು ಸಾಭೀತುಪಡಿಸಲು ಸಾಧ್ಯವಾಗಲಿಲ್ಲ ಎಂದರೆ ಸರಿಯಲ್ಲ. ಕಾರ್ಮಿಕರು

ESI.A.No.54/2018

AW-1,

ರೂ.15000-00 ಕ್ಕಿಂತ ಜಾಸ್ತಿ ವೇತನವನ್ನು ಪಡೆಯುತ್ತಿದ್ದ ಬಗ್ಗೆ ಪ್ರೊಫೆಷನ್ ಟ್ಯಾಕ್ಸ ಪಾವತಿ ಮಾಡಿದ ಬಗ್ಗೆ ಸಂಬಂಧಪಟ್ಟ ದಾಖಲೆಗಳಲ್ಲಿ ಎಂಟ್ರಿಗಳನ್ನು ತೋರಿಸಿರಲಿಲ್ಲ ಎಂದರೆ ಸಾಕ್ಷಿಯು ಅದು ಅಕೌಂಟೆಂಟ್ ರವರ ತಪ್ಪು ಎಂದು ನುಡಿಯುತ್ತಾರೆ. ಪ್ರೊಫೆಷನ್ ಟ್ಯಾಕ್ಸ ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ನಾನು ಕೆಲಸವನ್ನು ಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಾನು ಆ ಸಮಯದಲ್ಲಿ ಲೇಬರ್ ಕಾಂಟ್ರಾಕ್ಟರ ಆಗಿ ಕೆಲಸ ಮಾಡುತ್ತಿದ್ದೆ. ನನ್ನ ಕಾರ್ಮಿಕರು ರೂ.15000-00 ಕ್ಕಿಂತ ಕಡಿಮೆ ಸಂಬಳವನ್ನು ಪಡೆಯುತ್ತಿದ್ದರೂ ಕೂಡ ಇ ಎಸ್ ಐ ವಂತಿಗೆ ಪಾವತಿಸುವುದನ್ನು ತಪ್ಪಿಸಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಹಾಜರು ಮಾಡದೇ ಇರುವುದರಿಂದ ಎದುರುದಾರರು ಪ್ರಶ್ನಿತ ಆದೇಶವನ್ನು ಮಾಡಿದ್ದಾರೆ ಮತ್ತು ನಾನು ರೂ.5,36,947-00 ಗಳನ್ನು ಜೂನ್-2015 ರಿಂದ ಡಿಸೆಂಬರ್-2016 ಅವಧಿಗೆ ಪಾವತಿಸಲು ನಾನು ಬದ್ಧನಾಗಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಕೇಳಿರುವ ಇ ಎಸ್ ಐ ವಂತಿಗೆಯನ್ನು ನನ್ನಿಂದ ಕಟ್ಟಲು ಸಾಧ್ಯವಿಲ್ಲ ಆದ್ದರಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),<br>
ಅಧ್ಯಕ್ಷಾಧಿಕಾರಿಗಳು/ಜಡ್ಜ್<br>
ಇ.ಎಸ್.ಐ.ನ್ಯಾಯಾಲಯ,<br>
ಮೈಸೂರು.